**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 31.08.2021.**

**1] ಕಲಕೇರಿ ಪೊಲೀಸ ಠಾಣೆ ಗುನ್ನೆ ನಂ: 111/2021 ಕಲಂ: 279, 304(ಎ) ಐ.ಪಿ.ಸಿ ಮತ್ತು 187 ಐ.ಎಮ್.ವ್ಹಿ ಆ್ಯಕ್ಟ್**

ದಿನಾಂಕ 30.08.2021 ರಂದು ಮುಂಜಾನೆ 10:30 ಗಂಟೆಗೆ ಇದರಲ್ಲಿ ಆರೋಪಿತನಾದ 1] ಟಾಟಾಎಸಿ ಗೂಡ್ಸ ವಾಹನ ನಂ; ಕೆಎ:53 ಎ:8162 ನೇದ್ದರ ಚಾಲಕ ಈತನು ತನ್ನ ವಾಹನವನ್ನು ಅತಿ ವೇಗ ಹಾಗೂ ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬಂದು ಹಾಯಿಸಿದ್ದರಿಂದ ಭಾಗ್ಯಲಕ್ಷ್ಮೀ ವಯಾ–10 ವರ್ಷ ಸಾ। ನೀರಲಗಿ ಇವಳಿಗೆ ಹಾಯಿಸಿ, ಮೂಗಿನಿಂದ ರಕ್ತ ಸ್ರಾವ ಆಗಿ, ಬಲ ಮೆಲಕಿಗೆ ಮತ್ತು ಬಲ ಎದೆಗೆ ಭಾರಿ ಒಳ ಪೆಟ್ಟಾಗಿದ್ದು, ಎರಡು ಗಲ್ಲಿಗೆ, ಎರಡು ಮೊಳ ಕಾಲಿಗೆ, ಎರಡು ಪಾದಿಗೆ, ಎಡ ಬೆನ್ನಿಗೆ, ಬಲ ಬರಕಿಗೆ ಮತ್ತು ಬಲಗೈ ರಟ್ಟೆಗೆ ತರಚಿದ ಗಾಯಗಳು ಆಗಿರುತ್ತವೆ. ಆಕೆಗೆ ಉಪಚಾರ ಕುರಿತು ಅಸ್ಕಿ ಸರಕಾರಿ ಆಸ್ಪತ್ರೆಗೆ ಹೋಗಿ ದಾಖಲು ಮಾಡಿದ್ದು, ಅಲ್ಲಿಂದೆ ಹೆಚ್ಚಿನ ಉಪಚಾರ ಕುರಿತು ತಾಳಿಕೋಟಿಯಲ್ಲಿರುವ ಸಿದ್ದ ಬಸವೇಶ್ವರ ಆಸ್ಪತ್ರೆಗೆ ಹೋಗಿ ದಾಖಲು ಮಾಡಿ ಉಪಚಾರ ಪಡಿಸಿ, ಅಲ್ಲಿಂದ ಹೆಚ್ಚಿನ ಉಪಚಾರ ಕುರಿತು ವಿಜಯಪೂರಕ್ಕೆ ಹೋಗುವಾಗ ಮಾರ್ಗ ಮದ್ಯ ಮನಗೂಳಿ ಹತ್ತಿರ ಮಧ್ಯಾಹ್ನ 12;30 ಗಂಟೆ ಸುಮಾರಿಗೆ ಮರಣ ಹೊಂದಿರುತ್ತಾಳೆ ಅಂತಾ ಫಿರ್ಯಾದಿದಾರನ ಫಿರ್ಯಾದಿಯಲ್ಲಿ ನಮೂದು ಅದೆ.ಈ ಬಗ್ಗೆ ಗುಂಡು ಚಂದ್ರಾಮಪ್ಪ ಶಿರಶ್ಯಾಡ ಸಾ। ನೀರಲಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 30.08.2021 ರಂದು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮಹಿಳಾ ಪೊಲೀಸ ಠಾಣೆ ಗುನ್ನಾ ನಂ: 98/2021 ಕಲಂ: ಮಹಿಳೆ ಕಾಣೆ**

ದಿನಾಂಕ: 27.08.2021 ರಿಂದ 27.08.2021 ವರೆಗೆ 12.00 ಗಂಟೆಯಿಂದ 12.15 ಗಂಟೆಯ ನಡುವಿನ ಅವಧಿಯಲ್ಲಿ ಇದರಲ್ಲಿಯ ಕಾಣೆಯಾದ ಶೇತಾ ತಂದೆ ಸದಾಶಿವ ದಶವಂತ ವಯಾ 20 ವರ್ಷ ಸಾ॥ ಬತಗುಣಕಿ ತಾ॥ ಇಂಡಿ ಇವಳು ವಿಜಯಪುರ ಬಸ್ ಸ್ಟ್ಯಾಡದಿಂದ ಎಲ್ಲಿಯೋ ಹೋಗಿ ಪರ್ತ ಮನೆಗೆ ಬಾರದೇ ಕ್ಷಣೆಯಾಗಿರುತ್ತಾಳೆ. ಈ ಬಗ್ಗೆ ಸದಾಶಿವ ತಂ/ಶಾಂತಪ್ಪ ದಶವಂತ ವಯಾ : 41 ವರ್ಷ ಜಾತಿ : ಹಿಂದು ಚನ್ನದಾಸರ ಉದ್ಯೋಗ: ಒಕ್ಕಲುತನ ಸಾ॥ ಬತಗುಣಕಿ ತಾ॥ ಇಂಡಿ ಜಿ॥ ವಿಜಯಪುರ ರವರು ಕೊಟ್ಟ ಪಿರ್ಯಾದಿ ಮೇರೆಗೆ ದಿನಾಂಕ: 30.08.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.